ಮೂಲ ದಾವಾ ಸಂಖ್ಯೆ . 8/2016 ಡಿ ಡಬ್ಲ್ಯೂ 1

(ದಿನಾಂಕ 30-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಪಿ ವಕೀಲರಿಂದಃ-

ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಬರೆಯಲು ವಕೀಲರಿಗೆ ಮಾಹಿತಿ ನಾನೇ ನೀಡಿದ್ದೇನೆ. ನಾನು ಈ ದಾವೆಯಲ್ಲಿ ಜಿ ಪಿ ಎ ಹೋಲ್ಡರ್ ಆಗಿ ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆಯಲ್ಲಿ ತಕರಾರನ್ನು ನನ್ನ ತಾಯಿ ಸಲ್ಲಿಸಿರುತ್ತಾರೆ. ಕೋಬಜ್ಜಿ ವೀರಮ್ಮ ಇವರ ಗಂಡನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಕೋಬಜ್ಜಿ ವೀರಮ್ಮ ಇವರ ಗಂಡನಿಗೆ ಒಬ್ಬ ತಮ್ಮ ಮತ್ತು ಒಬ್ಬ ತಂಗಿ ಇದ್ದಳು. ವೀರಮ್ಮನ ಗಂಡನ ತಾಯಿಯ ಹೆಸರು ನನಗೆ ಗೊತ್ತಿಲ್ಲ. ವೀರಮ್ಮನ ಗಂಡನಿಗೆ ಒಬ್ಬನೇ ಸಹೋದರ ಅವರ ಹೆಸರು ಸಿದ್ದಪ್ಪ ಇರುತ್ತದೆ. ಸಿದ್ದಪ್ಪನ ಹೆಂಡತಿಯ ಹೆಸರು ಕೋಬಜ್ಜಿ ಸಾವಿತ್ರಮ್ಮ ಇರುತ್ತದೆ. ವೀರಮ್ಮನ ಗಂಡನ ಸಹೋದರಿಯ ಗಂಡನ ಹೆಸರು ನನಗೆ ಹೇಳಲು ಬರುವುದಿಲ್ಲ.

ದಾವಾಸ್ತಿ ಹಂಪಸಾಗರ ಹೋಬಳಿ ಮೋರಿಗೇರಿ ಗ್ರಾಮಕ್ಕೆ ಸೇರಿರುತ್ತದೆ. ಸಾವಿತ್ರಮ್ಮ ಮತ್ತು ಪ್ರಕಾಶ್ ಇವರು ನಮ್ಮ ತಾಯಿಯ ಮೇಲೆ ದಾವೆ ದಾಖಲಿಸಿದ್ದಾರೆ. ದಾವಾಸ್ತಿಯ ಚಕ್ಕುಬಂದಿ ಪೂಃ ಎನ್ ಮಹೇಶ್ವರಗೌಡ ಇವರ ಜಮೀನು, ಪಃ ಕುಂಟೂರು ರುದ್ರಮ್ಮನವರ ಜಮೀನು, ಉಃ ಕುಂಟೂರು ಬಸವರಾಜರವರ ಜಮೀನು ಹಾಗೂ ದಃ ಕೋಬಜ್ಜಿ ವಿರೂಪಣ್ಣ ಇವರ ಜಮೀನು ಬರುತ್ತದೆ. ದಾವಾಸ್ತಿಯು ಈರಮ್ಮ ಮತ್ತು ಈರಮ್ಮನ ಗಂಡನ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಜಮೀನು ಕೆಂಪು ಮತ್ತು ಕಪ್ಪುಮಣ್ಣದ್ದಾಗಿರುತ್ತದೆ. ದಾವಾಸ್ತಿ ಒಟುಟ 3 ಎಕರೆ 29 ಸೆಂಟ್ಸ ಇರುತ್ತದೆ. ಪ್ರತಿವಾದಿಯು ಆರೋಗ್ಯವಾಗಿದ್ದು ಅವರ ಕಣ್ಣು ಕಾಣುತ್ತವೆ, ಕಿವಿ ಕೇಳುತ್ತವೆ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದು ಎಂದರೆ ಸರಿಯಲ್ಲ. ನಮ್ಮ ತಾಯಿಗೆ ನ್ಯಾಯಾಲಯಕ್ಕೆ ಓಡಾಡಲಾಗುವುದಿಲ್ಲಾಂತ ನಾನು ಜಿ ಪಿ ಎ ಪಡೆದಿದ್ದೇನೆ. ಈರಮ್ಮ

ಮೂಲ ದಾವಾ ಸಂಖ್ಯೆ . 8/2016 ಡಿ ಡಬ್ಲ್ಯೂ 1

ಇವರ ಎಲ್ಲಾ ಜವಾಬ್ದಾರಿಗಳನ್ನು ವಾದಿಯರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವಾಸ್ತಿಯು ಮೂಲತಃ ಕೋಬಜ್ಜಿ ಭರಮಪ್ಪ ಇವರಿಗೆ ಸೇರಿದ್ದು ಎಂದರೆ ಸರಿ. ನಂತರದಲ್ಲಿ ಕೋಬಜ್ಜಿ ಸಿದ್ದಪ್ಪ ಮತ್ತು ಭರಮಪ್ಪ ಇವರು ದಾವಾಸ್ತಿಯನ್ನು ಸಾಗು ಮಾಡುತ್ತಿದ್ದರೆಂದರೆ ಸಾಕ್ಷಿಯು ಭರಮಪ್ಪ ಮಾತ್ರ ಸಾಗು ಮಾಡುತ್ತಿದ್ದರೆಂದು ನುಡಿಯುತ್ತಾರೆ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಆದರೂ ಸಹಾ ಸುಳ್ಳು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಂದೆ ಸೇರಿ ವೀರಮ್ಮ ಇವರು ವಿಲ್ ಬರೆದಿರುತ್ತಾರಂತಾ ಸುಳ್ಳು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ದಾವಾಸ್ತಿಯ ಪಿತ್ರಾರ್ಜಿತ ಸೊತ್ತು ಆಗಿರುವುದರಿಂದ ಅವರಿಗೆ ದಾವಾಸ್ತಿಗೆ ಸಂಬಂಧಿಸಿದಂತೆ ವಿಲ್ ಬರೆದುಕೊಡುವ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ